# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 347 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರವಿಕುಮಾರ್ ಎನ್.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10.03.2025 |

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಖಾಸಗಿ ವಿಶ್ವವಿದ್ಯಾನಿಲಯಗಳ ಸಂಖ್ಯೆ ಎಷ್ಟು: (ಹೆಸರುಗಳೊಂದಿಗೆ ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 30 ಖಾಸಗಿ ವಿಶ್ವವಿದ್ಯಾಲಯಗಳಿದ್ದು, ವಿವರವನ್ನು ಅನುಬಂಧ- 1ರಲ್ಲಿರಿಸಿದೆ. |
| (ಆ) | ಈ ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಅದರಲ್ಲಿ ಹೊರ ರಾಜ್ಯದ ಮತ್ತು ಹೊರ ದೇಶದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ವಿಶ್ವವಿದ್ಯಾನಿಲಯವಾರು ವಿವರ ನೀಡುವುದು) | ಮಾಹಿತಿಯನ್ನು ಅನುಬಂಧ – 2ರಲ್ಲಿರಿಸಿದೆ. |
| (ಇ) | ಈ ವಿಶ್ವವಿದ್ಯಾನಿಲಯಗಳಲ್ಲಿ ಯಾವ ಯಾವ ಕೋರ್ಸುಗಳನ್ನು ಬೋಧಿಸಲಾಗುತ್ತಿದೆ. (ವಿಶ್ವವಿದ್ಯಾನಿಲಯವಾರು ವಿವರ ನೀಡುವುದು) | ವಿಶ್ವವಿದ್ಯಾಲಯವಾರು ಮಾಹಿತಿಯನ್ನು ಅನುಬಂಧ – 3ರಲ್ಲಿರಿಸಿದೆ. |
| (ಈ) | ಈ ಖಾಸಗಿ ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗೆ ವಿಧಿಸುವ ಶುಲ್ಕವೆಷ್ಟು ಸರ್ಕಾರ ಗರಿಷ್ಠ ಶುಲ್ಕ ನಿಗಧಿ ಪಡಿಸಿದೆಯೇ? (ವಿವರ ನೀಡುವುದು) | **ವೃತ್ತಿ ಶಿಕ್ಷಣ ಕೋರ್ಸುಗಳಿಗೆ:**<br><br>ಖಾಸಗಿ ವಿಶ್ವವಿದ್ಯಾಲಯಗಳ ವೃತ್ತಿ ಶಿಕ್ಷಣ ಕೋರ್ಸುಗಳ ಪೈಕಿ ಶೇ.40 ರಷ್ಟು ಸರ್ಕಾರಿ ಸೀಟುಗಳಿಗೆ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗಧಿ) ಅಧಿನಿಯಮ, 2006ರ (2006ರ ಕರ್ನಾಟಕ ಅಧಿನಿಯಮ 8) ಅನುಸಾರವಾಗಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದಂತೆ ಶುಲ್ಕ ಇರುತ್ತದೆ. |

| | | |
|---|---|---|
| | | ಉಳಿದಂತೆ, ಶೇ. 60 ರಷ್ಟು ವೃತ್ತಿಶಿಕ್ಷಣ ಕೋರ್ಸುಗಳಿಗೆ ಹಾಗೂ ತಾಂತ್ರಿಕೇತರ ಕೋರ್ಸುಗಳಿಗೆ ಸಂಬಂಧಿಸಿದಂತೆ, ಪ್ರತಿಯೊಂದು ಖಾಸಗಿ ವಿಶ್ವವಿದ್ಯಾಲಯವು ತಮ್ಮದೇ ಆದ ವಿಶ್ವವಿದ್ಯಾಲಯ ಕಾಯ್ದೆ ಹೊಂದಿದ್ದು, ಅದರ ಪ್ರಕಾರ ತಮ್ಮದೇ ಶುಲ್ಕ ನಿಯಂತ್ರಣ ಸಮಿತಿಯನ್ನು (ಮಾನ್ಯ ಸರ್ವೋಚ್ಚ ನ್ಯಾಯಾಲಯದ/ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನು ಸದರಿ ಸಮಿತಿಯ ಅಧ್ಯಕ್ಷರನ್ನಾಗಿ ಹಾಗೂ ಸರ್ಕಾರದ ನಾಮ ನಿರ್ದೇಶಿತ ಸದಸ್ಯರು ಮತ್ತು ಇತರೆ ಸದಸ್ಯರುಗಳನ್ನು ಒಳಗೊಂಡಂತೆ) ರಚಿಸಿಕೊಂಡು, ಸದರಿ ಸಮಿತಿಯು ನಿಗಧಿಪಡಿಸಿದ ಶುಲ್ಕವನ್ನು ಪಡೆಯಬೇಕು ಮತ್ತು ಸರ್ಕಾರದಿಂದ ಯಾವ ಗರಿಷ್ಠ ಶುಲ್ಕವು ನಿಗಧಿಯಾಗಿರುವುದಿಲ್ಲ. |

ಸಂಖ್ಯೆ: ಇಡಿ/88/ಯುಆರ್‌ಸಿ/2025

(ಡಾ|| ಎಂ.ಸಿ ಸುಧಾಕರ್)

ಉನ್ನತ ಶಿಕ್ಷಣ ಸಚಿವರು.